**ದಿನಾಂಕಃ 14-11-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ವಿ.ಎಸ್.ಎ.ವಕೀಲರಿಂದಃ**

ಮೃತ ರಾಕೇಶ ನನಗೆ ಒಬ್ಬನೇ ಮಗನಾಗಿರುತ್ತಾನೆ, ಹೆಣ್ಣು ಮಕ್ಕಳು ಯಾರೂ ಇರುವುದಿಲ್ಲ. ನನ್ನ ಗಂಡನ ಹೆಸರು ಗುರುಶಾಂತಪ್ಪ ಪೂಜಾರ ಎಂದರೆ ಸರಿ. ಅವರು ಜೀವಂತ ಇರುತ್ತಾರೆ. ಅವರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಾನು ಮತ್ತು ನನ್ನ ಗಂಡ ಒಟ್ಟಿಗೆ ವಾಸವಾಗಿರುತ್ತೇವೆ. ನಮಗೆ 1 ½ ಎಕರೆ ಬಯಲು ಜಮೀನು ಇರುತ್ತದೆ. ಮಗ ತೀರಿಕೊಂಡ ನಂತರ ಕೃಷಿ ಮಾಡುವವರು ಯಾರೂ ಇಲ್ಲದ ಕಾರಣ ನಾವು ಆ ಜಮೀನಿನಲ್ಲಿ ಬೆಳೆಯುತ್ತಿಲ್ಲ. ಆ ಜಮೀನಿನ ಪಹಣಿ ಹಾಜರು ಪಡಿಸಿರುವುದಿಲ್ಲ. ಇವತ್ತಿಗೂ ಸಹ ಆ ಜಮೀನಿಂದ ಸಮೃದ್ಧವಾಗಿ ಬೆಳೆ ಬರುತ್ತದೆ ಎಂದರೆ ಸರಿಯಲ್ಲ. ಅದರಿಂದ ಬಂದ ಆದಾಯದಲ್ಲಿ ನಾನು ಮತ್ತು ನನ್ನ ಗಂಡ ಜೀವನ ನಡೆಸುತ್ತೇವೆ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನಾನು, ನನ್ನ ಗಂಡ ಮತ್ತು ನನ್ನ ಮಗ ಕೂಡಿಯೇ ಜೀವನ ನಡೆಸುತ್ತಿದ್ದೇವು. ಅಪಘಾತದ ಬಗ್ಗೆ ನನ್ನ ಗಂಡ ದೂರು ಕೊಟ್ಟಿರುತ್ತಾರೆ. ನಿಪಿ-2 ರ ದೂರಿನಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿಯಾಗಿರುತ್ತವೆ. ಕೆಎ.15/ಟಿಎ.9823 ಟ್ರಾಕ್ಟರನ್ನು ನಮ್ಮ ಮನೆಯ ಕೆಲಸಕ್ಕಾಗಿ ಖರೀದಿ ಮಾಡಿದ್ದೇವು ಎಂದರೆ ಸರಿಯಲ್ಲ. ದೂರಿನಲ್ಲಿ ಕೆಎ.15/ಟಿಎ.9823 ಟ್ರಾಕ್ಟರನ್ನು ರಾಜಪ್ಪ ತಂದೆ ಫಕ್ಕೀರಪ್ಪ ಕಡೆಯಿಂದ ಖರೀದಿ ಮಾಡಿದ್ದೇವೆ ಎಂದು ಬರೆದಿರುತ್ತೇವೆ ಎಂದರೆ ಸಾಕ್ಷಿ ಅದು ಸರಿ ಇಲ್ಲ ಎಂದು ಹೇಳುತ್ತಾರೆ. ಸದರಿ ವಿಷಯ ಸರಿ ಇಲ್ಲ ಎಂದು ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ. ಅಪಘಾತದ ಸಮಯದಲ್ಲಿ ಸದರಿ ಟ್ರಾಕ್ಟರ ಮಾಲೀಕ ನನ್ನ ಗಂಡ ಆಗಿದ್ದರು ಎಂದರೆ ಸರಿಯಲ್ಲ. ನನ್ನ ಗಂಡನೇ ಸದರಿ ಟ್ರಾಕ್ಟರನ ಮಾಲೀಕನಾಗಿದ್ದರಿಂದ ಆತನನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಮೃತ ನನ್ನ ಮಗ 1 ನೇ ಎದುರುದಾರನ ಕೆಳಗೆ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ಶವ ಪಂಚನಾಮೆಯಲ್ಲಿ ಬರೆದ ಅಂಶಗಳು ಸರಿಯಾಗಿರುತ್ತವೆ. ನಿಪಿ-5 ರಲ್ಲಿ ನನ್ನ ಶೇತ್ಕರಿ ಕೆಲಸ ಮಾಡತ್ತಿದ್ದ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ವಿಚಾರ ಸರಿ ಇಲ್ಲ ಎಂದು ನನ್ನ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರ ಹೇಳಿಕೆಯ ಮೇಲೆ ನನ್ನ ಮಗ ಚಾಲಕನಾಗಿ ಕೆಲಸ ಮಾಡುತ್ತಿದ್ದಾಗ ಅಪಘಾತವಾಗಿ ಮೃತ ಪಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ 1 ನೇ ಎದುರುದಾರ ಮತ್ತು ನನ್ನ ಮಗ ನಡುವೆ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನನ್ನ ಮಗನಿಗೆ 28/29 ವರ್ಷ ವಯಸ್ಸು ಆಗಿತ್ತು ಎಂದರೆ 23 ವರ್ಷ ವಯಸ್ಸಾಗಿತ್ತು ಎಂದು ಹೇಳುತ್ತಾರೆ . ನನ್ನ ಮಗ ಚಾಲಕ ಕೆಲಸದಿಂದ ಪ್ರತಿ ತಿಂಗಳು 20 ಸಾವಿರ ಮತ್ತು ದಿನಭತ್ಯೆ ರೂ.200/- ಪಡೆಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಟ್ರಾಕ್ಟರ್ ಚಲಾಯಿಸಲು ಚಾಲನಾ ಪರವಾನಿಗೆ ಇರಲಿಲ್ಲ ಎಂದು ಪೋಲಿಸರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಡಿ.ಎಲ್ ಇತ್ತು ಎಂದು ಹೇಳುತ್ತಾರೆ. ನನ್ನ ಮಗನಿಗೆ ಚಲಾಯಿಸಲು ಚಾಲನಾ ಪರವಾನಿಗೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರರು ಮತ್ತು ನನ್ನ ಮಗನ ನಡುವೆ ಮಾಲೀಕ ಮತ್ತು ಕಾರ್ಮಿಕ ಸಂಬಂಧ ಇಲ್ಲದೇ ಇರುವುದರಿಂದ ಹಾಗೂ 1 ನೇ ಎದುರುದಾರರು ಸದರಿ ಟ್ರಾಕ್ಟರನ ಮಾಲೀಕರಾಗಿಲ್ಲದ ಕಾರಣ 2 ನೇ ಎದುರುದಾರರು ಯಾವುದೇ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

ಪರಿಹಾರ ಪಡೆದು ಕೊಳ್ಳಬೇಕು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.